# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳ ವ್ಯಾಪ್ತಿಯ ಇತರೆ ಇಲಾಖೆಯ ಅಧಿಕಾರಿ/ಸಿಬ್ಬಂದಿಯವರುಗಳ ವೇತನ ವೆಚ್ಚಕ್ಕಾಗಿ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರ ಸಂಭಾವನೆಗಾಗಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಆರ್ಥಿಕ ಇಲಾಖೆ ವೆಚ್ಚ 3, 4 ಮತ್ತು 5 ಶಾಖೆಗಳ ಕಡತ ಸಂಖ್ಯೆ: ಆಇ 105 ವೆಚ್ಚ 3/2018, ಆಇ 83 & 114 ವೆಚ್ಚ 4/2018 ಮತ್ತು ಆಇ 752, 1077, 616, 1082, 644 & 1170 ವೆಚ್ಚ 5/2017

**ಪ್ರಸ್ತಾವನೆ:**

ರಾಮನಗರ, ಚಿಕ್ಕಮಗಳೂರು, ಬಾಗಲಕೋಟೆ,ಬೆಳಗಾವಿ ಮತ್ತು ಉಡುಪಿ ಜಿಲ್ಲಾ ಪಂಚಾಯತ್‌ಗಳ ಮತ್ತು ಮದ್ದೂರು, ಕನಕಪುರ ತಾಲ್ಲೂಕು ಪಂಚಾಯತ್‌ಗಳ ವ್ಯಾಪ್ತಿಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ತೆರವಾಗಿದ್ದ ವೈದ್ಯಾಧಿಕಾರಿ/ಸಿಬ್ಬಂದಿಯವರುಗಳ ಹುದ್ದೆಗಳು ಭರ್ತಿಯಾದ್ದರಿಂದ ಹಾಗೂ ತೆರವಾಗಿರುವ ಹುದ್ದೆಗಳಿಗೆದುರಾಗಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ವೈದ್ಯಾಧಿಕಾರಿ/ಸಿಬ್ಬಂದಿಯವರ ಸಂಭಾವನೆಗಾಗಿ ಪ್ರಧಾನ ಲೆಕ್ಕ ಶೀರ್ಷಿಕೆ 2210ರಡಿ, ಶಿವಮೊಗ್ಗ ಜಿಲ್ಲಾ ಪಂಚಾಯತ್ ಹಾಗೂ ಮಾಗಡಿ ತಾಲ್ಲುಕು ಪಂಚಾಯತ್ ವ್ಯಾಪ್ತಿಯ ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ತೋಟಗಾರಿಕೆ ಇಲಾಖೆ ಮತ್ತು ಧಾರವಾಡ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ರೇಷ್ಮೆ ಇಲಾಖೆಗಳಲ್ಲಿ ತೆರವಾದ ಹುದ್ದೆಗಳು ಭರ್ತಿಯಾದ್ದರಿಂದ ವೇತನ ವೆಚ್ಚಕ್ಕಾಗಿ ಪ್ರಧಾನ ಲೆಕ್ಕ ಶಿರ್ಷಿಕೆ 2225, 2435 ಮತ್ತು 2851ರಡಿ ಒಟ್ಟು ರೂ.729.11ಲಕ್ಷ ಅನುದಾನವನ್ನು ಹೆಚ್ಚುವರಿಯಾಗಿ ಒದಗಿಸಿ ಬಿಡುಗಡೆಗೊಳಿಸುವಂತೆ ಕೋರಿದ್ದು, ಕೋರಿರುವ ಹೆಚ್ಚುವರಿ ಅನುದಾನವನ್ನು ಲೆಕ್ಕ ಶೀರ್ಷಿಕೆ 2515-00-196-1-05-300 ಅಡಿ ರೂ.679.98ಲಕ್ಷ ಹಾಗೂ ಲೆಕ್ಕ ಶೀರ್ಷಿಕೆ 2515-00-197-1-10-300ರಡಿ ರೂ.49.13ಲಕ್ಷಗಳನ್ನು ಬಿಡುಗಡೆಗೊಳಿಸಲು ನಿರ್ಣಯಿಸಲಾಗಿದೆ. ಅದರನ್ವಯ ಕೆಳಕಂಡಂತೆ ಆದೇಶಿಸಲಾಗಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 115 ವೆಚ್ಚ 6/2018 ದಿನಾಂಕ:27ನೇ ಫೆಬ್ರವರಿ 2018

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಕಾಲಂ 2 ಜಿಲ್ಲಾ ಪಂಚಾಯತ್‌ಗಳಿಗೆ ಕಾಲಂ 3 ಕಾರ್ಯಕ್ರಮದಡಿಯಲ್ಲಿ ಕಾಲಂ 4ರನ್ವಯ 2515-00-196-1-05-300 ಅಡಿ ಕಾಲಂ 5ರನ್ವಯ ಲೆಕ್ಕ ಶೀರ್ಷಿಕೆ 2515-00-197-1-10-300 ಅಡಿ ಕಾಲಂ 6ರಂತೆ ಒಟ್ಟು ಅನುದಾನ ರೂ.729.11ಲಕ್ಷ (ರೂಪಾಯಿ ಏಳು ನೂರ ಇಪ್ಪತ್ತೊಂಬತ್ತು ಲಕ್ಷದ ಹನ್ನೊಂದು ಸಾವಿರಗಳು ಮಾತ್ರ)ಗಳನ್ನು ಬಿಡುಗಡೆಗೊಳಿಸಲಾಗಿದೆ. ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ಮೇಲೆ (1)ರಲ್ಲಿ ಓದಲಾದ ಸುತ್ತೋಲೆಯಲ್ಲಿ ನೀಡಿದ ನಿರ್ದೇಶನದಂತೆ ಕ್ರಮವಹಿಸಿ ಬಿಲ್ಲುಗಳ ತೀರುವಳಿಗೆ ಕ್ರಮವಹಿಸತಕ್ಕದ್ದು. ಪ್ರಸ್ತುತ ಪ್ರಕರಣಕ್ಕೆ ಆರ್ಥಿಕ ಇಲಾಖೆ ಮರುಹೊಂದಾಣಿಕೆಗೆ ಸಹಮತಿಸಿದೆ ಎಂದು ಭಾವಿಸತಕ್ಕದ್ದು.

(ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು/ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳು ಬಿಡುಗಡೆಗೊಳಿಸಿರುವ ಅನುದಾನವನ್ನು ನಿಧಿ-2ಕ್ಕೆ ಜಮೆ ಮಾಡಿಕೊಂಡು ನಂತರ ಮರು ಹೊಂದಾಣಿಕೆ ಆದೇಶವನ್ನು ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರುರವರಿಗೆ ಸುತ್ತೋಲೆರನ್ವಯ ಪ್ರಸ್ತಾವನೆ ಸಲ್ಲಿಸಿ ಖಜಾನೆಯಲ್ಲಿ ಅಪ್‌ಲೋಡ್ ಮಾಡಿಕೊಳ್ಳುವುದು)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ಪುರುಷೋತ್ತಮ್ ಸಿಂಗ್ ಬಿ.ಹೆಚ್.)**
ವಿಶೇಷಾಧಿಕಾರಿ(ಜಿ.ಪಂ),
ಆರ್ಥಿಕ ಇಲಾಖೆ

1. ಮಹಾಲೇಖಪಾಲರು (ಎ&ಇ), ಲೆಕ್ಕ ಪರಿಶೋಧನೆ 1&2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಆರೋಗ್ಯ & ಕುಟುಂಬ ಕಲ್ಯಾಣ/ಸಮಾಜ ಕಲ್ಯಾಣ ಕೃಷಿ/ರೇಷ್ಮೆ ಇಲಾಖೆ
3. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು,
4. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5. ಸಂಬಂಧಪಟ್ಟ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು
6. ಸಂಬಂಧಪಟ್ಟ ಜಿಲ್ಲಾ/ಉಪ ಖಜಾನೆ ಅಧಿಕಾರಿಗಳು
7. ರಕ್ಷಾ ಕಡತಕ್ಕೆ
8. ಹೆಚ್ಚುವರಿ ಪ್ರತಿ

ದ.ಪು.ತಿ.ನೋ. . . . .

## ಸರ್ಕಾರದ ಆದೇಶ ಸಂಖ್ಯೆ: ಆಇ 115 ವೆಚ್ಚ 6/2018 ದಿನಾಂಕ:27.2.2018ಕ್ಕೆ ಅನುಬಂಧ

(ರೂ.ಲಕ್ಷಗಳಲ್ಲಿ)

| ಆರ್ಥಿಕ ಇಲಾಖೆ/ಆಡಳಿತ ಇಲಾಖೆಯ ಕಡತ ಸಂಖ್ಯೆ | ಜಿಲ್ಲಾ/ತಾಲ್ಲೂಕು ಪಂಚಾಯತ್ | ಕಾರ್ಯಕ್ರಮದ ಲೆಕ್ಕಶೀರ್ಷಿಕೆ ಮತ್ತು ಆಬ್ಜೆಕ್ಟ್ ಹೆಡ್ – ಹಾಗೂ ಬಿಡುಗಡೆಗೊಳಿಸಿದ ಲೆಕ್ಕ ಶೀರ್ಷಿಕೆ | | | |
|---|---|---|---|---|---|
| | | ಲೆಕ್ಕ ಶೀರ್ಷಿಕೆ | 2515-00-196-1-05-300 | 2515-00-197-1-10-300 | ಒಟ್ಟು |
| 1 | 2 | 3 | 4 | 5 | 6 |
| ಆಇ 105 ವೆಚ್ಚ 3/2018 | ಮಾಗಡಿ | 2225-00-101-0-61-001 | | 17.57 | 17.57 |
| | ಶಿವಮೊಗ್ಗ | 2225-00-102-0-33-001<br>2225-00-102-0-52-001 | 13.00<br>0.52 | | 13.52 |
| ಆಇ 114 ವೆಚ್ಚ 4/2018 | ಕೊಪ್ಪಳ | 2435-00-101-0-26-001 | 12.00 | | 12.00 |
| ಆಇ 83 ವೆಚ್ಚ 4/2018 | ಧಾರವಾಡ | 2851-00-107-0-26-001 | 20.00 | | 20.00 |
| ಆಇ 752 ವೆಚ್ಚ 5/2017 | ಮದ್ದೂರು | 2210-00-101-0-62-001<br>2210-00-101-0-61-001 | | 25.00<br>5.00 | 30.00 |
| ಆಇ 1077 ವೆಚ್ಚ 5/2017 | ರಾಮನಗರ | 2210-00-101-0-27-001<br>2210-00-101-0-32-001<br>2210-00-102-0-36-001<br>2210-00-101-0-27-034<br>2210-00-101-0-33-034<br>2210-00-102-0-36-034 | 80.00<br>6.66<br>75.00<br>48.32<br>9.63<br>35.97 | | 255.58 |
| | ಕನಕಪುರ | 2210-00-101-0-62-034 | | 1.56 | 1.56 |
| ಆಇ 616 ವೆಚ್ಚ 5/2017 | ಚಿಕ್ಕಮಗಳೂರು | 2210-00-101-0-27-034<br>2210-00-101-0-33-034<br>2210-00-103-0-26-034<br>2210-00-103-0-30-034 | 44.27<br>3.25<br>56.52<br>0.65 | | 104.69 |
| ಆಇ 1082 ವೆಚ್ಚ 5/2017 | ಬಾಗಲಕೋಟೆ | 2210-00-101-0-27-034<br>2210-00-101-0-28-034<br>2210-00-101-0-32-034<br>2210-00-103-0-26-034<br>2210-00-103-0-30-034 | 99.84<br>52.08<br>2.64<br>69.96<br>20.76 | | 245.28 |
| ಆಇ 644 ವೆಚ್ಚ 5/2017 | ಬೆಳಗಾವಿ | 2210-00-106-0-48-001 | 3.00 | | 3.00 |
| ಆಇ 1170 ವೆಚ್ಚ 5/2017 | ಉಡುಪಿ | 2210-00-101-0-29-001 | 25.91 | | 25.91 |
| | ಒಟ್ಟು | | **679.98** | **49.13** | **729.11** |

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)
ವಿಶೇಷಾಧಿಕಾರಿ (ಜಿ.ಪಂ.)
ಆರ್ಥಿಕ ಇಲಾಖೆ